




ಸಾಂಪ್ರದಾಯಿಕ ಪದ್ಧತಿಯಲ್ಲಿ ಎಪಿಎಸ್ ದೊರ್ಸಾಟ ಜೇನುಕೃಷಿ

ಎಪಿಎಸ್ ಸೆರೆನಾ ಇಂಡಿಕಾ ಜೇನುಗೂಡನ್ನು ಪೆಟ್ಟಿಗೆಯಲ್ಲಿಡುವ ಫ್ರೇಮ್‌ಗಳಿಗೆ ಕಟ್ಟುತ್ತಿರುವ ಹರ್ಷ



ಎಪಿಎಸ್ ಸೆರೆನಾ ಇಂಡಿಕಾ ಜೇನುಗೂಡಿನ ಪೆಟ್ಟಿಗೆ



10 ರೂಪಾಯಿಯ ಎಪಿಎಸ್ ಸೆರೆನಾ ಇಂಡಿಕಾ ಜೇನಿನ ಕ್ಯಾಂಡಿಪಿನ್ ಮತ್ತು 20 ರೂಪಾಯಿ ಬೆಲೆಯ ಬೀ ವ್ಯಾಕ್ಸ್ ಮೇಣ

ಖರೀದಿದಾರರು ಜೇನು ಇಳಿಸುವ ಕಾರ್ಮಿಕರಿಗೆ ಎಲ್ಲ ವ್ಯವಸ್ಥೆಯನ್ನು ಒದಗಿಸುತ್ತಾರೆ.

ಜೇನು ಕಾರ್ಮಿಕರು, ಕಕ್ಕೆ ಗಿಡದ (ಕ್ಯಾಸಿಯಾ ಫಿಸ್ಟುಲಾ) ಸೊಪ್ಪು ಬಳಸಿ ದಟ್ಟವಾಗಿ ಹೊಗೆ ಹಾಕಿ, ಜೇನ್ನೊಣಗಳನ್ನು ಗೂಡಿನಿಂದ ಹೊರಗಿಡುತ್ತಾರೆ. ರಾತ್ರಿಯ ವೇಳೆ ಜೇನು ಹುಟ್ಟು ಬಿಡಿಸುವಾಗ ಚಳಿಗೂ ಈ ಬೆಂಕಿ ಕಾಯಿಸುತ್ತದೆ. ಹಿಲಾಲ್ ನಮೂನೆಯ ಪಂಜಿನಿಂದ ಗೂಡಿಗೆ ಒಂದೇ ಸಮನೆ ರಪರಪ ಬಡಿದು ಪಂಜಿನ ಪೆಟ್ಟು ಮತ್ತು ಬುಡದ ಬೆಂಕಿಯ ಶಾಖಕ್ಕೆ ನೂರಾರು ಜೇನ್ನೊಣಗಳು ಸಾವನ್ನಪ್ಪುತ್ತವೆ.

ಜೇನು ಬಿಡಿಸಿ ಕೆಳಗೆ ತಂದು, ಮೇಣದ ಹುಟ್ಟನ್ನು ಶಾಖಕ್ಕೆ ಕಾಯಿಸಿದಾಗ ಮರಿ, ಲಾರ್ವಾ ಮತ್ತು ತತ್ತಿ ಸೇರಿದ ಗಿಣ್ಣು ರೂಪುಗೊಳ್ಳುತ್ತದೆ. ಅದನ್ನು ಜೇನುತುಪ್ಪದಲ್ಲಿ ಅದ್ದಿ ತಿಂದರೆ, ಮತ್ತೆ ಕೆಲವಷ್ಟು ಹುಟ್ಟು ಪೇಟೆಯಲ್ಲಿ ಮಾರಾಟಕ್ಕೆ ಅಣಿಗೊಳ್ಳುತ್ತವೆ. ಪರಿಸರಸ್ನೇಹಿ ಜೀವನ ವಿಧಾನವನ್ನು ರೂಢಿಸಿಕೊಂಡಿರುವ ಕೀಟವೊಂದರ ಅವಸಾನ ಹೀಗೆ ಮೂಕವಾಗಿ ಧಾರವಾಡದಲ್ಲಿ ನಡೆದು ಹೋಗುತ್ತಿದೆ.

ಸ್ವಂತ ಉಣಬೇಕೆಂಬ ಸೀಮಿತ ಬಳಕೆಯನ್ನು ಮೀರಿ, ಅಲ್ಪ ಲಾಭಕ್ಕಾಗಿ ವ್ಯಾಪಕವಾದ ಮಾರುಕಟ್ಟೆಗೆ ಸರಬರಾಜು ಮಾಡುವ ವ್ಯಾಪಾರಿ ಧೋರಣೆಗೆ ಜೇನುಗಳು ಅಪಾಯಕ್ಕೆ ಸಿಲುಕಿವೆ. ಕಾರ್ಖಾನೆಗಳಲ್ಲಿ ಜೇನುತುಪ್ಪ ತಯಾರಿಸಿ, ಮಾರುಕಟ್ಟೆಗೆ ಪೂರೈಸುವ ಉದ್ದಿಮೆಯೊಂದು ಜೀವ ತಳೆದಿರುವ ಈ ಕಾಲಘಟ್ಟದಲ್ಲಿ ಪರಾಗಸ್ಪರ್ಶವನ್ನೂ ಫ್ಯಾಕ್ಟರಿಯಲ್ಲೇ ಕೃತಕವಾಗಿ ಮಾಡುವ ಯೋಚನೆಯೂ ಶುರುವಾಗಿರುವುದು ಆತಂಕಕಾರಿ ವಿಷಯ.

ನಮ್ಮ ಭಾಗದ ಹೂವಿನ ಗಿಡಗಳು, ಪಾತರಗಿತ್ತಿ ಪ್ರಜಾತಿಗಳು, ಜೇನುಹುಳುವಿನೊಟ್ಟಿಗೆ ಹೊಂದಿದ್ದ ಅಂತಃಸಂಬಂಧ ಮತ್ತು ಸಹ ಸಂಬಂಧದ ಗತಿ? ನೈಸರ್ಗಿಕ ಪರಾಗಸ್ಪರ್ಶದ ಸಂಭವನೀಯತೆ? ಅಧ್ಯಯನಯೋಗ್ಯ.

ಜೇನು ಸಾಕಣೆಗೆ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಜೇನುಗೂಡಿಗೆ ಕೈ ಹಾಕಿ ತುಪ್ಪ ತೆಗೆಯುವಾಗ ಎಚ್ಚರಿಕೆಯ ಕ್ರಮಗಳನ್ನಾದರೂ ಅನುಸರಿಸಬೇಕಾದ ಔಚಿತ್ಯ ಕಡ್ಡಾಯ. ಜೇನ್ನೊಣದ ಸಾವಿಗೆ ಮನುಷ್ಯ ಕಾರಣವಾಗಬಾರದು. ಜೇನುದುಂಬಿಗಳನ್ನು, ಅವುಗಳ ಕುಟುಂಬವನ್ನು ನಾವು ವೈಯಕ್ತಿಕ ಶಕ್ತ್ಯಾನುಸಾರ ಪೋಷಿಸಬಹುದು. ಧಾರವಾಡದ ನಮ್ಮ ಮನೆಯಲ್ಲಿ, 8 ಪೆಟ್ಟಿಗೆಗಳಲ್ಲಿ ಜೇನು ಸಾಕಣೆಯನ್ನು ನಾನು ಸ್ವತಃ ಮಾಡುತ್ತಿದ್ದೇನೆ. ಆಸಕ್ತಿ ಇದ್ದವರು ತರಬೇತಿ ಪಡೆಯಬಹುದು.

ಪ್ರತಿಕ್ರಿಯಿಸಿ: feedback@sudha.co.in